**ಸಾಕ್ಷಿಗೆ ದಿನಾಂಕ 03.12.2025 ರಂದು ಪ್ರಮಾಣ ವಚನ ನೀಡಲಾಯಿತು.**

**ಮುಂದುವರೆದ ಪಾಟೀಸವಾಲುಃ ವಾದಿ ಪರ ಶ್ರೀ C.R ವಕೀಲರಿಂದ**

ನನ್ನ ತಂದೆ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಯಿಂದ ಖರೀದಿಸಿರುತ್ತಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಹಲಗಪ್ಪರವರಿಂದ ಖರೀದಿ ಮಾಡಿದ್ದರು. ಹಲಗಪ್ಪರವರು ಬಸವಲಿಂಗಪ್ಪರವರ ಮಗ ಈರಯ್ಯರವರಿಂದ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ. 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಯಾವ ಯಾವ ದಾಖಲನೆಗಳನ್ನು ಪರಿಶೀಲನೆ ಮಾಡಿದ್ದರು ನನಗೆ ಗೊತ್ತಿಲ್ಲ. ನನ್ನ ತಂದೆ ಖರೀದಿಸುವ ಸಮಯದಲ್ಲಿ ಯಾವ ದಾಖಲನೆಗಳನ್ನು ಪರಿಶೀಲನೆ ಮಾಡಿರುತ್ತಾರೆ ನನಗೆ ಗೊತ್ತಿಲ್ಲ ನನ್ನ ತಂದೆಯಿಂದ ನಾನು ತಿಳಿದುಕೊಂಡಿಲ್ಲ. ನಿಪಿ-1 ರಿಂದ 6 ದಾಖಲೆಗಳನ್ನು ವಾದಿ ತಾಲೂಕು ಕಛೇರಿಯಿಂದ ಪಡೆದುಕೊಂಡ ದೃಢೀಕೃತ ದಾಖಲೆಗಳು ಎಂದರೆ ಸರಿ. ನಿಪಿ-1 ನ್ಯಾ.ದ ಆದೇಶದ ಮೇರೆಗೆ ಖಾತೆ ಆಗಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ-2 ವಾದಿಯ ತಾಯಿ ಕೆಂಪಮ್ಮರವರ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನಿಪಿ-2 ವಾದಿಯ ತಾಯಿಯ ಹೆಸರಿನಲ್ಲಿದ್ದರು ಸಹ ದಾವ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ವಾದಿಯ ತಾಯಿಯ ಹೆಸರಿನಲ್ಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ಯಾವುದೇ ಒಬ್ಬ ವ್ಯಕ್ತಿ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಸದರಿ ಆಸ್ತಿಯ ಮಾಲೀಕತ್ವವನ್ನು ಪರಿಶೀಲನೆ ಮಾಡಿ ನಂತರ ಖರೀದಿಸಬೇಕು ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಯಾವುದೇ ವಿಚಾರ ಗೊತ್ತಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ಮತ್ತು 4 ರಲ್ಲಿ ನ್ಯಾ.ದ ಆದೇಶದಂತೆ ಕೆಂಪಮ್ಮರವರ ಹೆಸರಿಗೆ ನಮೂದು ಇದೆ ಎಂದರೆ ಸರಿ. ನಿಪಿ-5 ರ ಪ್ರಕಾರ 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿ. ನಿಪಿ-5 ರಲ್ಲಿ ನಮೂದು ಮಾಡಿರುವ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ಸರ್ವೆ ನಂಬರ 68 ರ ಜಮೀನಿನ ಚೆಕ್ಕುಬಂದಿ ಹಾಗೂ ದಾವಾ ಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ನಿಪಿ-5 ರ ಚೆಕ್ಕುಬಂದಿಯಲ್ಲಿ ದಕ್ಷಿಣದ ದಿಕ್ಕಿಗೆ ಕೆಂಪಮ್ಮರವರ ಜಮೀನು ಎಂದು ನಮೂದು ಮಾಡಿದ್ದು ಅದು ದಾವಾ ಸ್ವತ್ತು ಎಂದರೆ ಸರಿ. ಸರ್ವೆ ನಂಬರ 68 ಹಾಗೂ ಸರ್ವೆ ನಂಬರ 71 ರ ಜಮೀನು ಬೇರೆ ಬೇರೆ ಜಾಗದಲ್ಲಿದೆ ಎಂದರೆ ಅಕ್ಕಪಕ್ಕದಲ್ಲಿದೆ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿಸುವ ಸಮಯದಲ್ಲಿ ದಾವಾ ಸ್ವತ್ತು ಈರಯ್ಯರವರ ಹೆಸರಿನಲ್ಲಿರಲಿಲ್ಲ ಎಂದರೆ ಸರಿಯಲ್ಲ. ಈರಯ್ಯರವರ ಹೆಸರಿನಲ್ಲಿತ್ತು ಎಂದು ತೋರಿಸಲು ನಿಡಿ-1 ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ಈರಯ್ಯರವರ ಹೆಸರಿನಲ್ಲಿತ್ತು ಎಂದು ತೋರಿಸಲು ಕಂದಾಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀಸವಾಲಿಗೆ ಕಾಲವಕಾಶವನ್ನು ಕೇಳಿದ್ದು ಕಾಲವಕಾಶವನ್ನು ನೀಡಲಾಯಿತು.

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**